ನಿಮ್ಮೊಡನೆ

# ನೊಂದವರ ನೋವ ನೋಯದವರೆತ್ತ ಬಲ್ಲರು

ಇತ್ತೀಚಿನ ವರ್ಷಗಳಲ್ಲಿ, ಪುರುಷ ರಾಜಕಾರಣಿಗಳು ಹನಿಟ್ರ್ಯಾಪ್ ಪ್ರಕರಣಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಿಲುಕಿಕೊಳ್ಳುತ್ತಿರುವುದು ಅವರೊಳಗಿನ ಹೆಣ್ಣುಬಾಕತನಕ್ಕೆ ನಿದರ್ಶನ. ಅಧಿಕಾರಕ್ಕೆ ಹಪಹಪಿಸುವ ಬಹುತೇಕರು ಚಪಲ ಚೆನ್ನಿಗರಾಯರಾಗಿರುವುದು ಎಲ್ಲರಿಗೂ ಗೊತ್ತಿರುವ ಗುಟ್ಟು.

‘ಹುಡುಗಿಯನ್ನು ಕೊಲ್ಲುವ ಎಲ್ಲಾ ವಿಧಾನಗಳು ನಿಮಗೆ ತಿಳಿದಿವೆಯೇ? ದೇವರೇ, ಹಲವು ಮಾರ್ಗಗಳಿವೆ’ ಎನ್ನುವುದು ಕೆನಡಾದ ಬರಹಗಾರ್ತಿ ಕರ್ಟ್ನಿ ಸಮ್ಮರ್ಸ್ ಅವರ ಉದ್ಗಾರ. ಆ ಮಾರ್ಗಗಳು ಯಾವುದೆನ್ನುವುದಕ್ಕೆ ನಾವು ಕರ್ಟ್ನಿ ಅವರತ್ತ ನೋಡುವ ಅಗತ್ಯವಿಲ್ಲ. ಅತ್ಯಾಚಾರಕ್ಕೆ ಒಳಗಾದ ಹೆಣ್ಣುಮಕ್ಕಳ ಬಗೆಗಿನ ಸಮಾಜದ ಸ್ಪಂದನವನ್ನು ಗಮನಿಸಿದರೆ, ಅವರನ್ನು ಮತ್ತೆ ಮತ್ತೆ ಕೊಲ್ಲುವ ವಿಧಾನಗಳು ಅರಿವಿಗೆ ಬರುತ್ತವೆ.

ಕಳೆದ ವಾರ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಲಲಿತಾದ್ರಿ ಗುಡ್ಡದಲ್ಲಿ ವಿದ್ಯಾರ್ಥಿನಿಯೊಬ್ಬಳ ಮೇಲೆ ನಡೆದ ಸಾಮೂಹಿಕ ಅತ್ಯಾಚಾರದ ಘಟನೆ ಸಹಜವಾಗಿಯೇ ಜನರ ಮನಸ್ಸಿನಲ್ಲಿ ಕಂಪನಗಳನ್ನುಂಟು ಮಾಡಿತು. ಇಂಥದೊಂದು ಘಟನೆ ನಡೆದಾಗ ಸಮಾಜದ ಮೊದಲ ಪ್ರತಿಕ್ರಿಯೆ ಮೌನ ಮತ್ತು ವಿಷಾದ ಆಗಿರುತ್ತದೆ. ಸಂತ್ರಸ್ತ ಹೆಣ್ಣುಮಗಳಿಗೆ ನ್ಯಾಯ ದೊರಕಬೇಕೆಂದು ಸಮಾಜ ಬಯಸುತ್ತದೆ. ಆದರೆ, ನ್ಯಾಯ ದೊರಕಿಸಿಕೊಡಬೇಕಾದ ಸ್ಥಾನಗಳಲ್ಲಿ ಇರುವವರು ಎಷ್ಟು ಅಸೂಕ್ಷ್ಮರಾಗಿರಬಹುದು ಎನ್ನುವುದಕ್ಕೆ ಉದಾಹರಣೆಯಾಗಿ ನಾಡಿನ ಗೃಹ ಸಚಿವರ ಮಾತನ್ನು ಗಮನಿಸಬೇಕು. ‘ರಾತ್ರಿಯ ವೇಳೆ ಯುವಕ–ಯುವತಿ ಆ ನಿರ್ಜನ ಪ್ರದೇಶಕ್ಕೆ ಹೋಗಬಾರದಿತ್ತು’ ಎನ್ನುವ ಗೃಹ ಸಚಿವರ ಅಭಿಪ್ರಾಯಕ್ಕೆ ಪ್ರವಾಸೋದ್ಯಮ ಸಚಿವರ ಅನುಮೋದನೆ ಬೇರೆ. ಹೆಣ್ಣುಮಕ್ಕಳಲ್ಲಿ ಧೈರ್ಯ ಮತ್ತು ಆತ್ಮವಿಶ್ವಾಸ ತುಂಬಬೇಕಾದ ಸರ್ಕಾರದ ಪ್ರತಿನಿಧಿಗಳು, ‘ನಿಮಗೆ ಅಪಾಯವಿದೆ, ಆ ಕಾರಣದಿಂದಾಗಿ ಮನೆಯೊಳಗೇ ಇರಿ’ ಎಂದು ಸೂಚಿಸಿದರೆ, ಸಚಿವರಂತೆಯೇ ಜನಸಾಮಾನ್ಯರೂ ಯೋಚಿಸತೊಡಗಿದರೆ ಸಂತ್ರಸ್ತ ಹೆಣ್ಣುಮಗಳಲ್ಲಿ ಮೂಡಬಹುದಾದ ಭಾವನೆ ಎಂತಹದ್ದು ಎನ್ನುವುದನ್ನು ರಾಜಕಾರಣಿಗಳಿಗೆ ಅರ್ಥ ಮಾಡಿಸುವುದು ಹೇಗೆ? ದೂರದ ಅಫ್ಘಾನಿಸ್ತಾನದಲ್ಲಿನ ಹೆಣ್ಣುಮಕ್ಕಳ ಸುರಕ್ಷತೆಯ ಬಗ್ಗೆ ಆತಂಕಪಡುವ ನಮ್ಮ ಯೋಚನೆಗಳು, ‘ಹೆಣ್ಣುಮಕ್ಕಳು ಮನೆಗೆ ಸೀಮಿತವಾಗಿರಬೇಕು’ ಎನ್ನುವ ತಾಲಿಬಾನ್ ಮನಸ್ಥಿತಿಗಿಂಥ ಹೆಚ್ಚೇನೂ ಭಿನ್ನವಾಗಿಲ್ಲ.

ಹೆಣ್ಣುಮಕ್ಕಳು ಮನೆಯೊಳಗೆ ಉಳಿದಾಗ ಸುರಕ್ಷಿತವಾಗಿರುತ್ತಾರೆ ಎಂದು ಹೇಳುವಷ್ಟಕ್ಕೆ ಗೃಹ ಸಚಿವರ ಸೃಜನಶೀಲತೆ ಮುಗಿದಿಲ್ಲ. ಪ್ರಕರಣವನ್ನು ರಾಜಕೀಯಗೊಳಿಸುತ್ತಿರುವ ವಿರೋಧ ಪಕ್ಷದ ಪ್ರಯತ್ನ ಅವರಿಗೆ ತಮ್ಮ ಮೇಲೆಸಗಿರುವ ಅತ್ಯಾಚಾರದಂತೆ ಕಂಡಿದೆ. ಅವೇಳೆಯಲ್ಲಿ ಮನೆಯಿಂದ ಹೊರಬಂದುದಕ್ಕೆ ಆ ಹೆಣ್ಣು ನೋವು ಅನುಭವಿಸಬೇಕಾಯಿತು ಎನ್ನುವ ಗೃಹಸಚಿವರ ತರ್ಕವನ್ನೇ ಆಧರಿಸುವುದಾದರೆ, ಸುರಕ್ಷಿತ ವಾತಾವರಣದಲ್ಲಿರುವ ಅವರು ಅತ್ಯಾಚಾರಕ್ಕೆ ಒಳಗಾಗಿದ್ದು ಯಾವ ಕಾರಣಕ್ಕಾಗಿ ಎನ್ನುವುದನ್ನು ಹೇಳಬೇಕಾಗಿದೆ. ರೇಪ್ ಎನ್ನುವ ಪದವನ್ನು ಇಷ್ಟೊಂದು ಅಗ್ಗವಾಗಿ, ಬಿಡುಬೀಸಾಗಿ ಬಳಸುವ ಪುರುಷ ಮನಸ್ಥಿತಿಗೆ ಸಂತ್ರಸ್ತೆಯ ಸಂಕಟ ಅರ್ಥವಾಗುವುದು ಸಾಧ್ಯವಿಲ್ಲ. ನೊಂದವರ ನೋವ ನೋಯದವರೆತ್ತ ಬಲ್ಲರು.

ಅತ್ಯಾಚಾರಕ್ಕೆ ಒಳಗಾದ ಹೆಣ್ಣುಮಕ್ಕಳಲ್ಲಿ ತಪ್ಪು ಹುಡುಕುವ ರಾಜಕಾರಣಿಗಳ ಜಾಯಮಾನ ಇದು ಮೊದಲನೆಯದೂ ಅಲ್ಲ, ಕೊನೆಯದೂ ಅಲ್ಲ. ಇಂಥ ಮಾತುಗಳು ಜವಾಬ್ದಾರಿಯಿಂದ ನುಣುಚಿಕೊಂಡು ಘಟನೆಯ ತೀವ್ರತೆಯನ್ನು ತೆಳುವಾಗಿಸುವ ಪ್ರಯತ್ನವಾಗಿರುವಂತೆ, ಹೆಣ್ಣಿನ ಬಗ್ಗೆ ಅವರು ಹೊಂದಿರುವ ಲಘುವಾದ ಮನಸ್ಥಿತಿಯ ಅಭಿವ್ಯಕ್ತಿಯೂ ಆಗಿವೆ. ಹುಡುಗಿಯರು ಮನೆಯೊಳಗಿರಬೇಕು, ಹುಡುಗರು ಗೂಳಿಗಳಂತಿರಬೇಕು ಎನ್ನುವ ಮನೋಭಾವ ಸಮಾಜದಲ್ಲಿ ಢಾಳಾಗಿದೆ. ಆ ಧೋರಣೆಯನ್ನೇ ರಾಜಕಾರಣಿಗಳು ತಮ್ಮ ಮಾತುಗಳಲ್ಲಿ ಹೊರಹಾಕುತ್ತಾರೆ. ಆದರೆ, ಹೀಗೆ ಬೇಜವಾಬ್ದಾರಿತನದಿಂದ ಮಾತನಾಡುವವರಿಗೆ ತಾವು ನಿರ್ವಹಿಸುತ್ತಿರುವ ಸ್ಥಾನ–ಜವಾಬ್ದಾರಿಯ ಅರಿವೇ ಇರುವುದಿಲ್ಲ ಎನ್ನುವುದು ಅಪರಾಧದ ಘಟನೆಯಷ್ಟೇ ಘೋರವಾದುದು ಹಾಗೂ ಸಂತ್ರಸ್ತರ ನೋವನ್ನು ಹೆಚ್ಚಿಸುವಂತಹದ್ದು.

ಮಹಿಳೆಯರ ಸುರಕ್ಷತೆಯ ಬಗೆಗಿನ ಅತಿರೇಕದ ಕಾಳಜಿ ಹಾಗೂ ಅಸೂಕ್ಷ್ಮ ಮಾತುಗಳು ಅಧಿಕಾರದಲ್ಲಿರುವ ರಾಜಕಾರಣಿಗಳಿಗೆ ಸೀಮಿತವಾಗಿಲ್ಲ. ಎಲ್ಲ ಪಕ್ಷಗಳಲ್ಲೂ ಅಂತರಂಗದಲ್ಲಿ ‘ಪುರುಷ ಅಹಂ’ ಪೋಷಿಸಿಕೊಂಡಿರುವ ರಾಜಕಾರಣಿಗಳಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ, ಪುರುಷ ರಾಜಕಾರಣಿಗಳು ಹನಿಟ್ರ್ಯಾಪ್ ಪ್ರಕರಣಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಿಲುಕಿಕೊಳ್ಳುತ್ತಿರುವುದು ಅವರೊಳಗಿನ ಹೆಣ್ಣುಬಾಕತನಕ್ಕೆ ನಿದರ್ಶನ. ಅಧಿಕಾರಕ್ಕೆ ಹಪಹಪಿಸುವ ಬಹುತೇಕರು ಚಪಲ ಚೆನ್ನಿಗರಾಯರಾಗಿರುವುದು ಎಲ್ಲರಿಗೂ ಗೊತ್ತಿರುವ ಗುಟ್ಟು. ಅಧಿಕಾರದ ನಶೆಯನ್ನು ಪುರುಷ ಅಹಂ ಮತ್ತಷ್ಟು ಕೆರಳಿಸುತ್ತದೆ. ಹಣ ಬಲ, ತೋಳ್ಬಲ ಹಾಗೂ ಅಧಿಕಾರದ ಬಲದಿಂದ ಹೆಣ್ಣೂ ಸೇರಿದಂತೆ ಏನನ್ನು ಬೇಕಾದರೂ ದಕ್ಕಿಸಿಕೊಳ್ಳಬಹುದು ಎಂದು ಭಾವಿಸಿರುವವರು ನಮ್ಮ ನಡುವೆಯೇ ಇದ್ದಾರೆ.

ಅತ್ಯಾಚಾರಿಗಳನ್ನು ಪತ್ತೆ ಹಚ್ಚಿ ಶಿಕ್ಷೆ ವಿಧಿಸುವುದಕ್ಕೆ ನಮ್ಮ ವ್ಯವಸ್ಥೆ ಶಕ್ತವಾಗಿದೆ. ಆದರೆ, ನಮ್ಮ ಸಮಾಜ, ಅದರಲ್ಲೂ ಅಧಿಕಾರಬಲದ ಸಮಾಜ, ಕರ್ಟ್ನಿ ಸಮ್ಮರ್ಸ್ ಅವರು ಹೇಳುವಂತೆ – ‘ಹೆಣ್ಣನ್ನು ಹಣಿಯಲು ಹಲವು ದಾರಿ’ಗಳನ್ನು ಕಂಡುಕೊಂಡಿದೆ. ಅತ್ಯಾಚಾರ ಮನಸ್ಥಿತಿ ಹತ್ತಿಕ್ಕುವಷ್ಟೇ ಲಿಂಗಭೇದ ಧೋರಣೆ ಬದಲಿಸಿಕೊಳ್ಳುವುದು ಇಂದಿನ ಅಗತ್ಯ.

■ ರಘುನಾಥ ಚ.ಹ.

